# III Semester B.A./B.H.M. Examination, Nov./Dec. 2010
## (Freshers Scheme)
## ಕನ್ನಡ ಭಾಷಾ ಪತ್ರಿಕೆ - III
## ಸಾಹಿತ್ಯ ಸಂವಾದ - ೨

Time : 3 Hours Max. Marks : 90

ಭಾಗ - ೧

I. ಅರ್ಥ ಮತ್ತು ಧ್ವನಿ ಬದಲಾಗದಂತೆ ಮೂರು ವಾಕ್ಯಗಳಿಗೆ ಬದಲಿ ವಾಕ್ಯ ರಚಿಸಿ. (3×2=6)

೧) ಹಾಗೆ ಮಾಡಲು ಆಗದಿದ್ದಲ್ಲಿ ಮಾತ್ರ ಬಟ್ಟೆಗಳನ್ನು ನೀವೇ ಇಟ್ಟುಕೊಳ್ಳಬಹುದು.

೨) ಅಪ್ಪನನ್ನು ತಾನು ಪ್ರೀತಿಸುತ್ತಿದ್ದನೋ ಇಲ್ಲವೋ ಅವನಿಗೆ ನೆನಪಿಲ್ಲ.

೩) ಅವನನ್ನು ಭೆಟ್ಟಿಯಾಗಲು ಬಂದಾತ ಬಟ್ಟೆಯನ್ನೇ ತೊಟ್ಟಂತಿರಲಿಲ್ಲ!

೪) ಜೀವ ಅಳಿದ ಮೇಲೂ ಕಲೆ ಆ ವ್ಯಕ್ತಿಯನ್ನು ಕಾಲಾತೀತಗೊಳಿಸುತ್ತದೆ.

II. ಅರ್ಥವತ್ತಾದ ಕ್ರಮದಲ್ಲಿ ಮೂರು ವಾಕ್ಯಗಳನ್ನು ಪುನಾರಚಿಸಿ. (3×2=6)

೧) ದಾರಿ ತೋರುವ ಮತಿಯೇ ಕತ್ತಲಲ್ಲಿ ರತ್ನದ ಕೈದೀವಿಗೆ.

೨) ಡಾಕ್ಟರನ್ನು ರೂಮಿಗೆ ಕರೆಯಿಸಿ ಕಾಲುಗಂಟೆ ಬರುವ ಹೊತ್ತಿಗೆ ಸರಿದಿತ್ತು.

೩) ಸ್ನೇಹವನ್ನು ಬೆಸೆಯುವುದಕ್ಕೆ ಗಂಡುಹೆಣ್ಣುಗಳ ಅವರ ಕಾರಣವಾಗಬಹುದು ಸಾಮಿಪ್ಯ.

೪) ಎದೆಗೆ ಗುದ್ದುವಂತೆ ಹೊರಗೆ ಇದ್ದವರ ಎದ್ದು ಬರುವುದು ಗದ್ದಲ.

III. ಉಪಮೆ-ರೂಪಕಗಳನ್ನು ಬಳಸಿ ಮೂರು ಸ್ವಂತ ವಾಕ್ಯಗಳನ್ನು ರಚಿಸಿ. (3×2=6)

೧) ಗಾಳಿಗೊಡ್ಡಿದ ದೀಪಾಂಕುರದಂತೆ.

೨) ವಿಷಕನ್ನಿಕೆಯೆನ್ನನು ಮುಟ್ಟಿದ್ಯೆ.

೩) ಕೋಪಿಗಳಲ್ತೆ ತಾಪಸರ್

೪) ಪೊಲ್ತಳವಳ್ ಮುಗಿಲಮಱೆಯ ವಿದ್ಯುಲ್ಲತೆಯಂ.

IV. ಮೂರು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ. (3×2=6)

೧) ವಿಚಾರ ಸ್ವಾತಂತ್ರ್ಯ

೨) ಲಾಗಾಯ್ತು

೩) ಕುಶಾಲು ಹೋಗಿ ಅಸಾಲಾಯಿತು !

೪) ಗತಿಕಾಣಿಸು

V. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ. **(2×3=6)**

೧) ಅತಿ ಆಸೆ ಗತಿಕೇಡು

೨) ಊಟ ಬಲ್ಲವನಿಗೆ ರೋಗವಿಲ್ಲ

೩) ಕುಂತು ಉಣ್ಣೋರಿಗೆ ಕುಡಿಕೆ ಹೊನ್ನು ಸಾಲದು

೪) ಕಾರ್ಯವಾಸಿ ಕತ್ತೆ ಕಾಲು ಕಟ್ಟು

## ಭಾಗ – ೨

I. ನಾಲ್ಕು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆಯ ಹಿನ್ನೆಲೆಯಲ್ಲಿ ವಿವರಿಸಿ. **(4×5=20)**

೧) ಸಾವಿಲ್ಲದ ಮನೆ ಮತ್ತು ಸಾವಿನ ಬಗ್ಗೆ ಗೌರವವಿಲ್ಲದ ಮನುಷ್ಯ ಇವರನ್ನು ಕುರಿತ ಲೇಖಕರ ದೃಷ್ಟಿಕೋನ ಯಾವುದು ?

೨) 'ಟೊಳ್ಳುಗಟ್ಟಿ' ನಾಟಕದಲ್ಲಿ ಬಳಕೆಯಾಗಿರುವ ಕನ್ನಡ ಮಿಶ್ರಿತ ಇಂಗ್ಲಿಷ್ ಪದಗಳು ನಾಟಕದ ಆಶಯಕ್ಕೆ ಪೂರಕವಾಗಿವೆಯೇ ? ಚರ್ಚಿಸಿ.

೩) ನಿಜದ ಬದುಕಿಗಿಂತ ಮುಕ್ತಿಸ್ಥಾನವೇ ಸುಖದಾಯಕವಾದದ್ದು ಎಂಬುದನ್ನು ನೀಲಾಂಜನೆಯ ನೃತ್ಯ ಪ್ರಸಂಗವು ಪ್ರತಿಪಾದಿಸುವುದೇ ?

೪) ಆಧುನಿಕತೆಯ ಹೆಸರಿನಲ್ಲಿ ಆಗಮಿಸುವ ಡಾಂಬರು ರಸ್ತೆ ಸಂಘರ್ಷಕ್ಕೆ ಮತ್ತು ಬದಲಾವಣೆಗೆ ಕಾರಣವಾಗಿದೆಯೆ ?

೫) 'ನಿರ್ನೀತಿ' ಪ್ರಬಂಧದಲ್ಲಿ ಲೈಂಗಿಕತೆಯು ಕೇವಲ ಜೈವಿಕ ಪ್ರಶ್ನೆಯಾಗಿದೆಯೇ ?

೬) "ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಕುತ್ತಿಗೆಯ ಉರುಳಾಗಿದೆ " ಎಂಬ ಕುವೆಂಪು ಅವರ ಹೇಳಿಕೆಯನ್ನು ಚರ್ಚಿಸಿ.

## ಭಾಗ – ೩

I. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. **(2×10=20)**

೧) ಹೂ ತರಲು ಹೊರಟ ಮುನಿಕುಮಾರನು ಮಹಾಶ್ವೇತೆಯ ಅನುರಾಗಕ್ಕೆ ಸಿಲುಕುವ ಸನ್ನಿವೇಶವನ್ನು ಚಿತ್ರಿಸಿ.

೨) ಗೆಲಿಲಿಯೋನ ಶೋಧನೆಗಳನ್ನು ಜನರು ಅನುಮಾನದಿಂದ ನೋಡುತ್ತಿದ್ದುದು ಏಕೆ ?

೩) ಮತ್ತೇರಿಸುವ ಪ್ರಕೃತಿಯ ಹಿನ್ನೆಲೆಯಲ್ಲಿ ದೇಹಕಾಮನೆಗಳನ್ನು ಮೀರಲಾಗದ ಪಾಂಡು ಮಾದ್ರಿಯರು ದುರ್ಬಲವಾಗಿ ಕಾಣಿಸುತ್ತಾರೆಯೆ ? ವಿವರಿಸಿ.

## ಭಾಗ – ೪

I. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. **(2×10=20)**

೧) 'ಆಧುನಿಕ ವಿಜ್ಞಾನವು ಕೇಂದ್ರೀಕೃತ ವ್ಯವಸ್ಥೆ ಮತ್ತು ಶ್ರೇಣೀಕೃತ ವ್ಯವಸ್ಥೆಯನ್ನು ಪೋಷಿಸುತ್ತದೆ ' ಎಂಬ ಅಭಿಪ್ರಾಯ ಸರಿಯೆ ?

೨) ಬದುಕು ಸಾವಿನೆಡೆಗಿನ ಸತತ ಪ್ರಯಾಣ ಎನ್ನುವ ಕತೆಗಾರರ ನಿಲುವನ್ನು 'ಪಯಣ' ಕತೆಯಿಂದ ಚರ್ಚಿಸಿ.

೩) 'ಶಿಕ್ಷಣದ ಅಂತಿಮ ಗುರಿ ಜ್ಞಾನದ ಕ್ರೌರ್ಯವಲ್ಲ, ಮಾನವತೆಯ ಪ್ರತಿಪಾದನೆ'– ಟೊಳ್ಳುಗಟ್ಟಿ ನಾಟಕದ ಹಿನ್ನೆಲೆಯಲ್ಲಿ ಚರ್ಚಿಸಿ.

# III Semester B.A./B.H.M. Examination, Nov./Dec. 2010
## (Repeaters Scheme)
## ಕನ್ನಡ ಭಾಷಾ ಪತ್ರಿಕೆ - III
## ಹೊಸಗನ್ನಡ ಕವಿತೆ, ವಿಚಾರ ಸಾಹಿತ್ಯ

Time : 3 Hours Max. Marks : 90

I. ಅ) ಒಂದರ ಭಾವಾರ್ಥವನ್ನು ಬರೆಯಿರಿ. (1×5=5)

1) ಬೇಕಾದ ಹಣ್ಣಿಹುದು, ಹೂವಿಹುದು ತೌರಿನಲಿ
ಹೊಸ ಸೀರೆ, ರತ್ನಾದಾಭರಣ ;
ತಾಯಿ ಕೊರಗುವರಲ್ಲಿ ನೀವಿಲ್ಲದೂರಿನಲಿ
ನಿಮಗಿಲ್ಲ ಒಂದು ಹನಿ ಕರುಣ.

2) ತೊಂಡು ತೆರೆಗಳ ಮುಸುಕಿನಲ್ಲಿ
ಕಂಡು ಮಗಳ, ಕರಗಿಹೋದ-
ಒಂದು ಕೈ ನೀಡಿದಳು ನೆರವಿಗೆ,
ಒಂದು ತಬ್ಬಿತು ನಲ್ಲನ !

ಆ) ಮೂರಕ್ಕೆ ಸಂದರ್ಭ ಸಹಿತ ವಿವರಿಸಿ. (3×3=9)

1) ಆಡಿಕೊಳ್ಳಲು ಬ್ಯಾಡಿ ಬಡಿವಾರ ಬದುಕ
ಕತ್ತಲೆ ಬೆಳದಿಂಗಳೊಳಗ
2) ನಿಮಗೇತಕೀ ಕಲ್ಲು ಮನಸ್ಸು ?
3) 'ದೂರಕ್ಕೆ ಹಾರಬೇಡ, ದೀಪಕ್ಕೆ ತಾಗಬೇಡ,
ಹೋಗಿ ಬಾ' ಎಂದು ಆಶೀರ್ವದಿಸಿ.
4) ನಿಟ್ಟುಸಿರಿನ ನಡುವೆಯೂ 'ಆತ ತನ್ನ ದೈವ'
5) ಜಾರಕೃಷ್ಣನ ಕಥೆಗೆ ಕೋಡು ಮೂಡಿತ್ತು !
6) ಈಕೆ ಮೇರಿಯೂ ಅಲ್ಲ, ಹುಟ್ಟಿದ್ದು ಏಸುವಲ್ಲ.

ಇ) ಮೂರು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. (3×2=6)

ಬಿ.ಎಂ.ಶ್ರೀ., ಬಲಿ,
ಬಣ್ಣದ ಹುಳು, ಪ್ರೊ. ಬರಗೂರ ರಾಮಚಂದ್ರಪ್ಪ ,
ಗಿಡುಗ, ರಂಜಾನ್ ದರ್ಗಾ.

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (4×5=20)

1) 'ಬೆಕ್ಕಿನ ರೂಪಕ' ತತ್ವಪದದಲ್ಲಿ ಹೇಗೆ ಮೂಡಿ ಬಂದಿದೆ ?

2) ಅಡಿಗರ ಕವಿತೆಯಲ್ಲಿ ಕಂಡು ಬರುವ ಸ್ವಾಂತಿಕೆಯ ಹಂಬಲ.

3) ಗಿಡುಗ ಮತ್ತು ಎರೆಹುಳುವಿನ ಬಗೆಗೆ ಕವಿಯ ಅಭಿಪ್ರಾಯವೇನು ?

4) ಅನಾಮಿಕ ಆಂಗ್ಲರು ಯಾರು ? ಕವಿಯ ಅಭಿಪ್ರಾಯವನ್ನು ವಿವರಿಸಿ.

5) 'ಬಣ್ಣದ ಹುಳು' ಕವಿತೆಯಲ್ಲಿ ಮೂಡಿ ಬಂದಿರುವ ಬದುಕಿನ ದೃಷ್ಟಿಕೋನ.

6) 'ಹೆಜ್ಜೆಗುರುತು' ಕವಿತೆಯಲ್ಲಿ ಕವಿಯ ಅನುಭವವನ್ನು ವಿವರಿಸಿ.

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. **(2×10=20)**

1) 'ಎರಡು ಒಲಿದ ಜೀವಗಳನ್ನು ಅಗಲಿಸಲಾಗುವುದಿಲ್ಲ' ಎಂಬ ಸತ್ಯ 'ಕಾರಿ ಹೆಗ್ಗಡೆಯ ಮಗಳು' ಪದ್ಯದಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ ?

2) 'ಪುಟ್ಟವಿಧವೆ' ಕವನದ ದುರಂತವನ್ನು ಚಿತ್ರಿಸಿ.

3) 'ನನ್ನ ನುಡಿ' ಕವಿತೆಯ ಆಶಯವನ್ನು ಸ್ಪಷ್ಟಪಡಿಸಿ.

4) ಬಾಲಕಿಯೋರ್ವಳ ಹೆರಿಗೆ ಸಂದರ್ಭದ ಅನಾಥ ಪರಿಸ್ಥಿತಿಯನ್ನು ವಿವರಿಸಿ.

IV. ಐದು ಪ್ರಶ್ನೆಗಳಿಗೆ ಒಂದೊಂದೆ ವಾಕ್ಯದಲ್ಲಿ ಉತ್ತರಿಸಿ. **(5×1=5)**

1) ಪ್ರೀತಿಸುವುದರಲ್ಲಿ ಸಮಸ್ಯೆ ಏನು ?

2) ಡಾ. ಬಿ. ಆರ್. ಅಂಬೇಡ್ಕರ್ ಬರೆದ ಲೇಖನದ ಹೆಸರೇನು ?

3) ಫುಕುವೊಕಾನಿಗೆ ಲಭಿಸಿದ ಪ್ರಶಸ್ತಿಯ ಹೆಸರೇನು ?

4) 'ನೆನಿಸಿಕೊಂಡ ಗ್ರಾಮ' ಬರೆದವರು ಯಾರು ?

5) ಗಾಂಧೀಜೀ ಬರೆದ ಪುಸ್ತಕದ ಹೆಸರು.

6) ಶ್ರೀ ಎಂ. ಎನ್. ಶ್ರೀನಿವಾಸ ಅವರು ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಹಳ್ಳಿ ಯಾವುದು ?

7) ಡಾ. ಡಿ. ಆರ್. ನಾಗರಾಜ್ ಅವರು ಬರೆದ ಲೇಖನದ ಹೆಸರೇನು ?

V. ಒಂದನ್ನು ಕುರಿತು ವಿಮರ್ಶಾತ್ಮಕ ಟಿಪ್ಪಣಿ ಬರೆಯಿರಿ. **(1×5=5)**

1) 'ಎರಡು ಟಿಪ್ಪಣಿಗಳು' ಲೇಖನವನ್ನು ವಿಶ್ಲೇಷಿಸಿ.

2) ಸ್ತ್ರೀಯರನ್ನು ಕುರಿತ ಆಲೋಚನೆಗಳು 'ಲಿಂಗತಾರತಮ್ಯದ ಸ್ವರೂಪ' ಲೇಖನದಲ್ಲಿ ಹೇಗೆ ವ್ಯಕ್ತವಾಗಿದೆ ?

VI. ಎರಡು ಪ್ರಶ್ನೆಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. **(2×10=20)**

1) 'ಪ್ರೀತಿ ಎನ್ನುವುದು ಕಲೆ' ಹೇಗೆ ! ಲೇಖನದ ಹಿನ್ನೆಲೆಯಲ್ಲಿ ವಿಚಾರಮಾಡಿ.

2) "ಸ್ವಾತಂತ್ರ್ಯ ಮತ್ತು ಸಮಾನತೆಗೆ ಮತಾಂತರವೊಂದೆ ಮಾರ್ಗ" ಈ ಹೇಳಿಕೆಗೆ ಅಂಬೇಡ್ಕರ್ ಅವರ ವಾದಗಳೇನು ?

3) ಫುಕುವೊಕಾ ಒಬ್ಬ ಕೃಷಿ ವಿಜ್ಞಾನಿಯೆ ? –ಎರಡು ಟಿಪ್ಪಣಿಗಳು ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

4) ದೇಶಿ ಶಿಕ್ಷಣ ಪದ್ಧತಿಯ ನಾಶದ ಪರಿಣಾಮಗಳೇನು ? 'ಮೆಕಾಲೆಯ ಮಕ್ಕಳು' ಈ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

---